ಉಂಟು, ಅದನ್ನು ಗಮನದಲ್ಲಿಟ್ಟುಕೊಂಡು ಲೋಡ್ ಷೆಡ್ಡಿಂಗ್‌ನಲ್ಲಿರುವುದಕ್ಕೆ ವ್ಯತ್ಯಾಸವಾಗುವ ಹಾಗೆ ಸಹಾಯ ಮಾಡುವ ಪರಿಸ್ಥಿತಿ ನಿರ್ಮಾಣವಾಗುವುದಾದರೆ ಖಂಡಿತವಾಗಿಯೂ ನಾವು ಅವರಿಗೆ ಆದೇಶವನ್ನು ಕೊಟ್ಟು ಈ ಕೆಲಸವನ್ನು ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ :— ನೀವು ಕುಡಿಯುವ ನೀರಿಗೆ ಆದ್ಯತೆ ಕೊಟ್ಟು ಅಲ್ಲಿ ವಿದ್ಯುತ್ ಸರಬರಾಜಾಗುವ ಹಾಗೆ ಅವರು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕು. ನೀವು ಇನ್‌ಸ್ಟ್ರಕ್ಷನ್ ಕೊಟ್ಟರೆ ಅವರು ಮ್ಯಾನೇಜ್ ಮಾಡುತ್ತಾರೆ.

ಶ್ರೀ ಎಂ.ಸಿ. ನಾಣಯ್ಯ :— ಈ ಒಂದು ಪರಿಸ್ಥಿತಿ ಎಲ್ಲಾ ನಗರಗಳಲ್ಲೂ ಇದೆ. ನಿಮ್ಮ ಪಂಪಿಂಗ್ ಸ್ಟೇಷನ್ ಎಲ್ಲಿ ಇದೆ, ಅಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡಿದರೂ ಕೂಡ ಎಲ್ಲೊ ಒಂದು ಕಡೆ ಲೋಡ್ ಜಾಸ್ತಿಯಾದಕೂಡಲೇ ಅವರೇನು ಮಾಡುತ್ತಾರೆಂದರೆ ಗ್ರಿಡ್‌ನಲ್ಲೇ ಅದನ್ನು ಆಫ್ ಮಾಡುತ್ತಾರೆ. ಅದನ್ನು ಮಾಡುವುದಕ್ಕೆ ಆಗುವುದೇ ಇಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ ಸಾರಿಗೆ ಮಂತ್ರಿಗಳು :— ಮಾನ್ಯ ಅಧ್ಯಕ್ಷರೇ, ಮಾನ್ಯ ನಾಣಯ್ಯನವರು ತಿಳಿಸಿದ ಹಾಗೆ ಎಕ್ಸ್‌ಪ್ರೆಸ್ ಫೀಡರ್‌ನ್ನು ಹಾಕಬೇಕಾಗುತ್ತದೆ. ವಿಶೇಷವಾಗಿ ಅದನ್ನು ಹಾಕಿಕೊಡುವ ವ್ಯವಸ್ಥೆ ಮತ್ತು ಮುಂಡರಗಿ ಸ್ಟೇಷನ್‌ನಲ್ಲಿ ಆಗುವುದು ತಡವಾಗುತ್ತದೆ ಎಂದು ಹೇಳಿ ತಾವು ವೊಲ್ಟೇಜ್ ರೆಗ್ಯುಲೇಟರ್ಸ್ ಹಾಕಿ ಮಾಡುವಂಥದ್ದರ ಬಗ್ಗೆ ಏನು ಸೂಚನೆಯನ್ನು ಕೊಟ್ಟಿದ್ದಾರೆ, ಅದನ್ನು ಮಾಡಬಹುದು. ಎಂಟು ಲಕ್ಷ ರೂಪಾಯಿಗಳನ್ನು ಕೊಟ್ಟು ಅದನ್ನು ಮಾಡುವಂಥ ಕಾರ್ಯ ಆಗಬಹುದು.

ಶ್ರೀ ಡಿ.ಆರ್. ಪಾಟೀಲ್ :— ಅದನ್ನು ಮಾಡುತ್ತೇವೆ.

(2) ತುಂಗಾ ಮೇಲ್ದಂಡೆ ಯೋಜನೆಯ ಅನುಷ್ಠಾನದಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ.

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) :— ಮಾನ್ಯ ಅಧ್ಯಕ್ಷರೇ, ಬಚಾವತ್ ತೀರ್ಪಿನ ಪ್ರಕಾರ ಎರಡು ಸಾವಿರ ಇಸವಿಯೊಳಗೆ ಕಾರ್ಯಗತಗೊಳಿಸಬೇಕಾದ ತುಂಗಾ ಮೇಲ್ದಂಡೆ ಯೋಜನೆಯ ಕಾರ್ಯವಿಳಂಬ ಗತಿಯಲ್ಲಿ ನಡೆಯುತ್ತಿರುವ ಬಗ್ಗೆ ಭಾರಿ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

+ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) :— ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ ಜಿಲ್ಲೆಯ ಗಾಜನೂರು ಬಳಿ ಇರುವ ತುಂಗಾ ಆಣೆಕಟ್ಟನ್ನು ಎತ್ತಿಸಿ 339.50 ಕಿ.ಮೀ. ಎಡದಂಡೆ ಕಾಲುವೆ ಮೂಲಕ 99485 ಹೆಕ್ಟೇರ್ ಭೂಮಿಗೆ ನೀರಾವರಿ ನೀಡಲು 1988-89ರ ಸೂಚಿಯಂತೆ ರೂ.271.14 ಕೋಟಿಗಳ

ಅನುಮೋದಿತ ಅಂದಾಜಿನಂತೆ ರೂಪಗೊಂಡಿರುತ್ತದೆ. ಈ ಯೋಜನೆಯ ಬಗ್ಗೆ ತಾಂತ್ರಿಕ ಸಲಹಾ ಸಮಿತಿ ಹಾಗೂ ಬೃಹತ್ ನೀರಾವರಿ ನಿಯಂತ್ರಣಾ ಮಂಡಳಿ ಸಭೆಗಳಲ್ಲಿ ವಿವರ ಪರಿಶೀಲನೆ ನಂತರ ಈಗಿರುವ ಅಣೆಕಟ್ಟಿನ 100 ಮೀ. ಕೆಳಭಾಗದಲ್ಲಿ ಹೊಸ ಅಣೆಕಟ್ಟು ನಿರ್ಮಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿದೆ. ಈ ಹೊಸ ಅಣೆಕಟ್ಟು ನಿರ್ಮಾಣ ಕಾಮಗಾರಿಗೆ 2/99 ರಲ್ಲಿ ರೂ. 92 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್‌ಗಳ ಬಗ್ಗೆ ತಾಂತ್ರಿಕ ಸಲಹಾ ಸಮಿತಿಯ ಪರಿಶೀಲನೆಯಲ್ಲಿದೆ.

ಕೃಷ್ಣಾ ಕೊಳ್ಳದ ಯೋಜನೆಗಳನ್ನು ಕಾರ್ಯಗತಗೊಳಿಸಿ 2000ನೇ ಇಸವಿಯಲ್ಲಿ ಬಚಾವತ್ ತೀರ್ಪಿನನ್ವಯ ರಾಜ್ಯಕ್ಕೆ ಲಭ್ಯವಿರುವ 734 ಟಿ.ಎಂ.ಸಿ. ನೀರಿನ ಪಾಲನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಲು ಕ್ರಿಟಿಕಲ್ ಮತ್ತು ನಾನ್-ಕ್ರಿಟಿಕಲ್ ಕಾಮಗಾರಿಗಳೆಂದು ವರ್ಗೀಕರಿಸಿ, ಈ ಕಾಮಗಾರಿಗೆ ಕ್ರಿಟಿಕಲ್ ಕಾಮಗಾರಿಗಳ ಅಡಿಯಲ್ಲಿ ರೂ. 100 ಕೋಟಿಗಳನ್ನು 2000ನೇ ಇಸವಿಯೊಳಗೆ ವೆಚ್ಚ ಮಾಡಲು ತೀರ್ಮಾನಿಸಲಾಗಿದೆ. ಈಗ ಕೃಷ್ಣಾ ಕೊಳ್ಳದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಹೊರತುಪಡಿಸಿದ ಕಾಮಗಾರಿಗಳನ್ನು ತ್ವರಿತಗೊಳಿಸಲು ಹೊಸದಾಗಿ ರಚಿತವಾಗಿರುವ ಕೃಷ್ಣಾ ನೀರಾವರಿ ನಿಗಮದಡಿ ಈ ಕಾಮಗಾರಿಯನ್ನು ಕೈಗೊಳ್ಳಲು ವರ್ಗಾಯಿಸಿದೆ.

ಈ ಯೋಜನೆಯ 339.5 ಕಿ.ಮೀ. ಉದ್ದದ ಕಾಲುವೆಯಲ್ಲಿ 10ನೇ ಕಿ.ಮೀ. ವರೆಗಿನ ಕಾಲುವೆ ಕಾಮಗಾರಿಗಳು 1 ರಿಂದ 3 ಕಿ.ಮೀನಲ್ಲಿನ ಅರಣ್ಯ ಪ್ರದೇಶ ಹೊರತುಪಡಿಸಿ ಪ್ರಗತಿಯಲ್ಲಿರುತ್ತವೆ. 55ನೇ ಕಿ.ಮೀ.ವರೆಗಿನ ಕಾಲುವೆ ಕಾಮಗಾರಿಗಳು ಟೆಂಡರ್ ಕರೆದು ಕೈಗೊಳ್ಳುವ ಹಂತದಲ್ಲಿದೆ. 55 ರಿಂದ 150 ಕಿ.ಮೀ.ವರೆಗಿನ ಕಾಲುವೆಯ ಪಂಕ್ತೀಕರಣ ಅನುಮೋದಿತಗೊಂಡಿರುತ್ತದೆ. ಅಣೆಕಟ್ಟು ಕಾಮಗಾರಿಗಳು ಪೂರ್ಣಗೊಂಡನಂತರ ಉಳಿಕೆ ಕಾಲುವೆ ಕಾಮಗಾರಿಗಳನ್ನು ಮುಂದುವರೆಸಲು ಉದ್ದೇಶಿಸಿದೆ.

ಈ ಯೋಜನೆಯ ಅನುಮೋದನೆಗಾಗಿ ಕೇಂದ್ರ ಜಲ ಆಯೋಗಕ್ಕೆ 2/92 ರಲ್ಲಿ ಪ್ರಸ್ತಾವನೆ ಸಲ್ಲಿಸಿದ್ದು ಈ ಕೆಳಕಂಡ ಅಂಶಗಳಿಗೆ ಅನುಮೋದನೆ ದೊರೆತಿದೆ:-

1. Inster-State Aspects 2. Hydrology, 3. Agricultural Aspects, 4. Plant Planning Aspects, 5. Foundation Engineering Aspects, 6. B.C.D. (N.H. & E) Aspects 7. Command Area Development Aspects 8. Ground Water Aspects.

ಈ ಕೆಳಕಂಡ ಅಂಶಗಳ ಬಗ್ಗೆ ಕೇಂದ್ರ ಜಲ ಆಯೋಗದಿಂದ ಅನುಮೋದನೆ ದೊರೆಯಬೇಕಾಗಿದೆ. 1. Irrigation Aspects, 2. Construction Materials

3. Masonry Design Aspects, 4. Cost Engineering Aspects & Gate Design, 5. Environmental Aspects, 6. Forest Clearance.

ಈ ಯೋಜನೆಯ ಆಣೆಕಟ್ಟು ಕಾಮಗಾರಿಗಳಿಗೆ ಸಂಬಂಧಿಸಿದಂತೆ ೪೨೭.೨೯ ಹೆಕ್ಟೇರ್ ಮತ್ತು ಕಾಲುವೆ ಕಾಮಗಾರಿಗಳಿಗೆ ೨೨.೨೬ ಹೆಕ್ಟೇರ್ ಅರಣ್ಯ ಪ್ರದೇಶದ ಬಿಡುಗಡೆ ಅವಶ್ಯಕತೆ ಇದೆ. ಕೇಂದ್ರ ಅರಣ್ಯ ಮತ್ತು ಪರಿಸರ ಇಲಾಖೆಯ ಅನುಮೋದನೆ ದೊರೆತ ನಂತರ 1 ರಿಂದ 3 ಕಿ.ಮೀ.ನಲ್ಲಿರುವ ಕಾಲುವೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಈ ಯೋಜನೆಗೆ ಇದುವರೆವಿಗೂ ರೂ.27.92 ಕೋಟಿ ವೆಚ್ಚವಾಗಿರುತ್ತದೆ. 1998-99ನೇ ಸಾಲಿನ ಆಯವ್ಯಯದಲ್ಲಿ ರೂ. 4.30 ಲಕ್ಷಗಳ ಅನುದಾನ ಒದಗಿಸಿದೆ 1/99ರ ಅಂತ್ಯಕ್ಕೆ ರೂ.343 ಲಕ್ಷಗಳ ವೆಚ್ಚವಾಗಿದೆ.

ಈ ಯೋಜನೆಯನ್ನು ನಿಗದಿಪಡಿಸಿದಂತೆ 2000ನೇ ಇಸವಿಯಲ್ಲಿ ಕ್ರಿಟಿಕಲ್ ಕಾಂಪೊನೆಂಟ್ ಅಡಿಯಲ್ಲಿ ಕಾಮಗಾರಿಯ ಪ್ರಮುಖ ಅಂಗವಾದ ಆಣೆಕಟ್ಟು ನಿರ್ಮಾಣವನ್ನು ಕರ್ನಾಟಕ ನೀರಾವರಿ ನಿಗಮದ ಅಡಿ ಕೈಗೊಂಡು ಪೂರ್ಣಗೊಳಿಸಲು ಕಾಲಮಿತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆದ್ದರಿಂದ ಕೃಷ್ಣಾ ಕೊಳ್ಳದಲ್ಲಿ ನಿಗದಿಪಡಿಸಲಾದ 12.24 ಟಿ.ಎಂ.ಸಿ ನೀರನ್ನು ಉಪಯೋಗಿಸಿ ರಾಜ್ಯದ ಹಿತಾಸಕ್ತಿ ಕಾಪಾಡಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದ್ದರಿಂದ ಈ ಬಗ್ಗೆ ಯಾವುದೇ ಆತಂಕ, ಅನುಮಾನ ಪಡಬೇಕಾದ ಅವಶ್ಯಕತೆ ಇರುವುದಿಲ್ಲ.

+ ಶ್ರೀ ಯು.ಬಿ. ಬಣಕಾರ್:— ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕದ ಅತಿ ದುರ್ದೈವದ ಯೋಜನೆ ಇದು ಎಂದರೆ ತಪ್ಪಾಗಲಿಕ್ಕಿಲ್ಲ. ಸುಮಾರು 1972ನೇ ಇಸವಿಯಲ್ಲಿ ಪ್ರಾರಂಭವಾದ ಯೋಜನೆ ಅನುಷ್ಠಾನದ ಬಗ್ಗೆ ಪ್ರಾರಂಭವಾದ ಹೋರಾಟ ಇದುವರೆಗೂ ಸ್ಪಷ್ಟವಾದ ಸ್ವರೂಪವನ್ನು ಪಡೆದುಕೊಳ್ಳಲು ಇವತ್ತು ವಿಫಲವಾಗಿದೆ. ಇದುವರೆಗೂ ಹೇಳಿದ ಹಾಗೆ ಈ ಹಿಂದೆ ಇರುವಂಥ ಆಣೆಕಟ್ಟಿನ ಮೇಲೆ ಕ್ರಸ್ ಗೇಟ್ ಗೇಟನ್ನು ಇರಿಸುತ್ತೇವೆ ಎನ್ನುವ ಮಾತನ್ನು ಹೇಳಿ ಈಗ ಬದಲಾವಣೆ ಮಾಡಿ ಹೊಸ ಆಣೆಕಟ್ಟನ್ನು ಕಟ್ಟುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಸುಮಾರು ಒಂದು ತಿಂಗಳ ಹಿಂದೆ ಮಾನ್ಯ ನೀರಾವರಿ ಸಚಿವರು ಸಿಕ್ಕಾಗ ಈ ಒಂದು ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಕೊಟ್ಟಿದ್ದನ್ನು ತಿಳಿಸಿದರು. ಅದಷ್ಟು ಬೇಗ ಅವರು ಆಡಳಿತಾತ್ಮಕ ಅನುಮೋದನೆ ಕೊಟ್ಟಿದ್ದಾರೆ. ಆದರೆ ಇದುವರೆಗೂ ಒಂದು ತಾಂತ್ರಿಕ ಸಮಿತಿಯಿಂದ ಕ್ಲಿಯರ್ ಆಗಿಲ್ಲ. ಬಹುಶಃ ಅನವಶ್ಯಕ ವಿಳಂಬವಾಗುತ್ತಿದೆ. ಎರಡು ಸಾವಿರ ಇಸವಿಯೊಳಗಾಗಿ ಮುಗಿಯಬೇಕಾದ ಯೋಜನೆ ಇದುವರೆಗೂ ಸ್ಪಷ್ಟ ಸ್ವರೂಪ

ಇದಕ್ಕೆ ಸಿಗದೇ ಇರುವುದರಿಂದ ತಾವು ಏಕೆ ವಿಳಂಬವಾಗುತ್ತಿದೆ, ತಾಂತ್ರಿಕ ಸಮಿತಿಯಿಂದ ಈ ಒಂದು ಆಣೆಕಟ್ಟನ್ನು ಕಟ್ಟಲು ಏಕೆ ವಿಳಂಬ ಮಾಡುತ್ತಿದ್ದಾರೆ ಎಂದು ಇದರ ಬಗ್ಗೆ ಒತ್ತಾಯ ಮಾಡಿ ಕೂಡಲೇ ಆ ಆಣೆಕಟ್ಟಿಗೆ ಕ್ಲಿಯರೆನ್ಸ್ ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ಕೇಳುತ್ತಿದ್ದೇವೆ. ಈ ವರ್ಷ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳ ಅಂದಾಜಿನ ಯೋಜನೆ ಇದಾಗಿದೆ. ಆದರೆ ಈ ಸಲ ಇದಕ್ಕೆ ಕೇವಲ ನಾಲ್ಕುವರೆ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ. ಸುಮಾರು 3 ಕೋಟಿ 71 ಲಕ್ಷ ರೂಪಾಯಿಗಳ ಬಾಕಿ ಪಾವತಿಯನ್ನು ಮಾಡಬೇಕಾಗಿದೆಯೆಂದು ನಾನು ಈಗಾಗಲೇ ಹೇಳಿದ್ದೇನೆ. ಸಣ್ಣಪುಟ್ಟ ಕಾಮಗಾರಿಗಳನ್ನು ಮಾಡಿದಂಥ ಗುತ್ತಿಗೆದಾರರಿಗೆ ಕಳೆದ ಒಂದು ವರ್ಷದಿಂದ ಹಣವನ್ನು ಪಾವತಿ ಮಾಡಿಲ್ಲ. ಇದರಲ್ಲಿ ಒಂದು ಕೋಟಿ ಅರವತ್ತೊಂದು ಲಕ್ಷ ರೂಪಾಯಿಗಳ ಬಿಲ್ಲು ಬಾಕಿ ಇದೆ. ಈಗಾಗಲೇ ಹತ್ತು ಕಿಲೋಮೀಟರ್ ಕೆಲಸ ಪ್ರಾರಂಭ ಮಾಡಿರುವುದಾಗಿ ತಾವು ಹೇಳಿದ್ದೀರಿ. ಆದರೆ ಒಂದು ಮತ್ತ ಎರಡನೇ ಕಿಲೋಮೀಟರ್ ಪ್ರದೇಶ ಅರಣ್ಯದಲ್ಲಿ ಬರುತ್ತಿರುವುದರಿಂದ ಇವತ್ತಿನವರೆಗೆ ಅರಣ್ಯ ಪ್ರದೇಶವನ್ನು ಬಿಡುಗಡೆಗೊಳಿಸುವ ಪ್ರಯತ್ನವಾಗಿಲ್ಲ. ಅರಣ್ಯ ಇಲಾಖೆಯಿಂದ ಈ ಯೋಜನೆಗೆ ಎನಿ ಪ್ರದೇಶ ಬೇಕಾಗಿದೆ ಅದನ್ನು ಪಡೆಯುವ ಪ್ರಯತ್ನ ಕೂಡಲೇ ಮಾಡಬೇಕೆಂದು ಹೇಳಬಯಸುತ್ತೇನೆ. ಎರಡು ಸಾವಿರ ಇಸವಿಯೊಳಗೆ ಇದನ್ನು ಮಾಡಲು ತಾವು ಕಾಲಮಿತಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಆ ರೀತಿ ಮಾಡದಿದ್ದರೆ ತಾವು ಯಾವಾಗ ಈ ಯೋಜನೆಯನ್ನು ಮಾಡಿಸುತ್ತಿರಿ ಎಂಬ ಬಗ್ಗೆ ಸ್ಪಷ್ಟಪಡಿಸಬೇಕು. ಹಾವೇರಿ ಜಿಲ್ಲೆಯ ಎರಡು ಲಕ್ಷ ಮೂವತ್ತನಾಲ್ಕು ಸಾರಿರ ಎಕರೆ ಪ್ರದೇಶಕ್ಕೆ ನೀರಾವರಿಯನ್ನು ಒದಗಿಸುವ ಈ ಯೋಜನೆ ಹಾವೇರಿಯಲ್ಲಿ ಬರುವಂಥ ಪ್ರಮುಖ ನಾಲ್ಕು ತಾಲ್ಲೂಕುಗಳಲ್ಲಿ ಹಂಚಿಹೋಗಿದೆ. ನಮ್ಮ ಸುದೈವದಿಂದ ನಮ್ಮ ಜಿಲ್ಲೆಯವರು ಇಬ್ಬರು ಸಚಿವರಾಗಿದ್ದಾರೆ. ಅವರುಗಳೆಂದರೆ ಮಾನ್ಯ ಉದಾಸಿಯವರು ಮತ್ತು ಶಿವಣ್ಣನವರ್ ಇದ್ದಾರೆ. ದಯವಿಟ್ಟು ಅವರೂ ಸಹ ಯೋಜನೆ ಬಗ್ಗೆ ಕಾಳಜಿ ವಹಿಸಿ ಆದಷ್ಟು ಬೇಗನೆ ಈ ಯೋಜನೆ ಕಾರ್ಯರೂಪಕ್ಕೆ ಬರಲು ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :— ಮಾನ್ಯ ಅಧ್ಯಕ್ಷರೇ, ತುಂಗಾ ಮೇಲ್ದಂಡೆ ಯೋಜನೆಗೆ ಅಡಿಗಲ್ಲನ್ನು ಹಾಕತಕ್ಕ ಸಂದರ್ಭದಲ್ಲಿ ಕ್ರಸ್ಟ್‌ಗೇಟನ್ನು ಅಳವಡಿಸಿ ಚಾನಲ್ ಮಾಡಲಾಗುವುದು ಎಂದು ನಮಗೆ ತಿಳಿಸಲಾಗಿತ್ತು. ಆಗ ತೀರ್ಥಹಳ್ಳಿ ತಾಲ್ಲೂಕಿನ ಯಾವ ಭಾಗಗಳೂ ಸಹ ಮುಳುಗಡೆಯಾಗುವುದಿಲ್ಲ ಎಂಬ ಈ ಮಾತನ್ನು ಹಿಂದಿನ ಸರ್ಕಾರ ವಾಗ್ದಾನವಾಗಿ ಕೊಟ್ಟಿತ್ತು ತಾವು ಈಗ ಆಣೆಕಟ್ಟೆಯನ್ನು ಎತ್ತರಿಸಬೇಕೆಂದು ಹೇಳಿದರೆ ತೀರ್ಥಹಳ್ಳಿ ತಾಲ್ಲೂಕಿನ ಭಾಗ ಮುಳುಗಡೆಯಾಗುತ್ತದೆ ಆ ರೀತಿ ಮುಳುಗಡೆಯಾಗದೆ ಆಣೆಕಟ್ಟನ್ನು ಹೇಗೆ ಕಟ್ಟುತ್ತೀರಿ? ಹಾಗಾದರೆ ಹಿಂದೆ ವಾಗ್ದಾನ ಮಾಡಿದ್ದೇನು? ದಯವಿಟ್ಟು ಇದರ ಬಗ್ಗೆ ಹೇಳಬೇಕು.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಅಧ್ಯಕ್ಷರೆ, ಸಧ್ಯ ಇರತಕ್ಕ ಅಣೆಕಟ್ಟೆಯ ಮೇಲೆ ಕ್ರಸ್ಟ್ ಗೇಟ್ ಹಾಕಿ ನೀರನ್ನು ಕೆನಾಲ್ ಗೆ ತೆಗೆದುಕೊಂಡು ಹೋಗಬೇಕೆಂದು ಮೊದಲು ಯೋಜನೆ ಮಾಡಲಾಗಿತ್ತು. ಆದರೆ ಸಧ್ಯವಿರುವ ಅಣೆಕಟ್ಟೆಯ ಮೇಲೆ ಕ್ರಸ್ಟ್ ಗೇಟ್ ಹಾಕಿದರೆ ನಿಲ್ಲುವುದಿಲ್ಲವೆಂದು ಹೈಡ್ರಾಲಜಿ ಸ್ಟಡಿ ಮಾಡಿ, ಎರಡು ಮೂರು ತಾಂತ್ರಿಕ ಸಮಿತಿಗಳು ತಿಂಗಳಗಟ್ಟಲೆ ಆ ಸ್ಥಳಕ್ಕೆ ಹೋಗಿ ಅದರ ಹೈಡ್ರಾಲಜಿ, ಕ್ಯಾಲುಕಲೇಟ್ ಮಾಡಿ ಫ್ಲೋರ್ಸ್‌ನ್ನು ಕ್ಯಾಲಿಕುಲೇಟ್ ಮಾಡಿ, ಪ್ರಸೆಂಟ್ ಡ್ಯಾಂನ ಸ್ಟೆಂಥನ್ನು ನೋಡಿ, ಅಲ್ಲಿರುವ ಸ್ಪಿಸ್ ನ್ನು ಕ್ಯಾಲಿಕುಲೇಟ್ ಮಾಡಿ ತೀರ್ಥಹಳ್ಳಿಯ ಒಂದು ಎಕರೆ ಸಹ ಮುಳುಗಡೆಯಾಗದ ರೀತಿಯಲ್ಲಿ ಲೆವೆಲ್ ನ್ನು ಮೆನ್ ಟೆನ್ ಮಾಡಿ ಡ್ಯಾಂನ ನೂರು ಮೀಟರ್ ಕೆಳಗಡೆ ತೆಗೆದುಕೊಂಡು ಹೋಗಿ ತಾಂತ್ರಿಕ ಸಮಿತಿಯ ವರದಿಯ ಆಧಾರದ ಮೇಲೆ ಈ ಪ್ರಾಜೆಕ್ಟನ್ನು ತೆಗೆದುಕೊಂಡಿದ್ದೇವೆ. ತಾಂತ್ರಿಕ ಸಮಿತಿ ಇದನ್ನು ಕ್ಲಿಯರ್ ಮಾಡಿದೆ, ಕೇಂದ್ರ ಸರ್ಕಾರವೂ ಸಹ ಹೈಡ್ರಾಲಜಿ, ಕ್ರಾವ್ ಮ್ಯಾಟನ್ ಕಮ್ಯಾಂಡ್ ಏರಿಯಾವನ್ನು ಕ್ಲಿಯರ್ ಮಾಡಿದೆ, ಯಾವುದೇ ಒಂದು ಎಕರೆ ಸಹ ಮುಳುಗಡೆಯಾಗುವುದಿಲ್ಲ. ಕಾರಣ ನೂರು ಮೀಟರ್ ಬಿಲೋ ದಿ ಪ್ರೆಸೆಂಟ್ ಡ್ಯಾಂ ಮಾಡಿದ್ದೇವೆ. ತಾವು ಇಲ್ಲಿ ಹೋಗಿ ನೋಡಿದರೆ ಆ ವ್ಯತ್ಯಾಸ ಡೌನ್ ಸ್ಟ್ರೀಮ್‌ನಲ್ಲಿ ಎಷ್ಟು ಎಂಬುದು ಗೊತ್ತಾಗುತ್ತದೆ. ನೀರಿನ ಸ್ಟೋರೆಜ್ ಎಷ್ಟು ಇರಬೇಕೋ ಅಷ್ಟೇ ಇರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :— ತಾವು ಹೇಳುವ ರೀತಿಯದ್ದಾಗಿದ್ದರೆ, ಅವತ್ತು ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಕೊಡುವ ಸಂದರ್ಭದಲ್ಲಿ ಡೀಟೇಲ್ ಇನ್‌ವೆಸ್ಟಿಗೇಷನ್ ಮಾಡಿದಂಥ ಇಂಜಿನಿಯರ್ ಇರಲಿಲ್ಲವೆ?

ಶ್ರೀ ಕೆ.ಎನ್. ನಾಗೇಗೌಡ :— ನನ್ನ ಅನುಭವದ ಪ್ರಕಾರ ಗುಜರಾತ್‌ನಲ್ಲಿ ಇದೇ ರೀತಿ ಮಾಡಿ ಎರಡು ಮೂರು ಕಿತ್ತುಕೊಂಡು ಹೋಗಿಬಿಟ್ಟಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರೆ ಈ ಅಧಿವೇಶನ ಮುಗಿದ ಮೇಲೆ ಬೇಕಾದರೆ ಶಿವಮೊಗ್ಗಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ತಮಗೆ ಸ್ಥಳಕ್ಕೆ ಕರೆದುಕೊಂಡು ಹೋಗಿ ಎಲ್ಲವನ್ನು ತೋರಿಸುತ್ತೇನೆ. ಇನ್ನು ಮಾನ್ಯ ಬಣಕಾರ್‌ರವರ ವಿಚಾರದ ಬಗ್ಗೆ ಹೇಳುವುದಾದರೆ, ಟಿ.ಯಎ.ಸಿ.ಯವರು 20ನೇ ತಾರೀಖಿನ ಒಳಗಾಗಿ ಕ್ಲಿಯರ್ ಮಾಡಲು ಕಡತವನ್ನು ಬರೆದು ಕತಳುಹಿಸುತ್ತಿದ್ದೇವೆ. ಇಪ್ಪತ್ತನೆ ತಾರೀಖಿನೊಳಗೆ ಈ ಡ್ಯಾಂ ಬಗ್ಗೆ ಎಲ್ಲಾ ಕ್ಲಿಯರ್ ಮಾಡಿ ಕೆಲಸವನ್ನು ಪ್ರಾರಂಭ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ. ಈ ಕೆಲಸವನ್ನು ಮಾಡಲು ಹಣವಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಕೃಷ್ಣ ಮೇಲ್ದಂಡೆ ಯೋಜನೆಯನ್ನು ಬಿಟ್ಟು, ಇಂಥ ಕೃಷ್ಣ ಕೊಳ್ಳದಲ್ಲಿ ಬರತಕ್ಕ ಪ್ರಾಜೆಕ್ಟ್‌ಗಳಿಗೆ ಕರ್ನಾಟಕ ನಾರಾವರಿ ನಿಗಮ ಎಂಬ ಸಂಸ್ಥೆಯನ್ನು ಮಾಡಿ ಈ ಮಾರ್ಚ್ ಒಳಗೆ 200 ಕೋಟಿ

ಮುಂದಿನ ಮೂರ್ನಾಲ್ಕು ತಿಂಗಳಿನಲ್ಲಿ 400 ಕೋಟಿ ಹಣವನ್ನು ಎತ್ತುತ್ತಿದ್ದೇವೆ. ಒಟ್ಟು 600 ಕೋಟಿ ರೂಪಾಯಿಗಳನ್ನು ಎರಡನೆ ನಿಗಮದಿಂದ ಎತ್ತಿ ಇನ್ನುಳಿದಿರುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ತುಂಗಾ ಮೇಲ್ದಂಡೆ ಯೋಜನೆಯನ್ನು ಕೂಡ ಎರಡನೇ ನಿಗಮಕ್ಕೆ ಬರುತ್ತದೆ, ಇದಕ್ಕೆ ಸಹ ಹಣದ ಕೊರತೆ ಇಲ್ಲ. ನಾವು ಈಗಾಗಲೇ 2100 ಕೋಟಿ ರೂಪಾಯಿಗಳನ್ನು ಮೊದಲ ನಿಗಮದಲ್ಲಿ ಪಡೆದಿದ್ದೇವೆ.. ಮುಂದಿನ ತಿಂಗಳು 200 ಕೋಟಿ ಎತ್ತುತ್ತಿದ್ದೇವೆ. ಬ್ಯಾಂಕುಗಳು 600. ಕೋಟಿ ರೂಪಾಯಿಗಳನ್ನೂ ಇದೇ ತಿಂಗಳಿನಲ್ಲಿ ಹೂಡಲು ಸಿದ್ಧವಾಗಿವೆ. ಆದರೆ ಬಡ್ಡಿ ಆಗುತ್ತದೆಂದು ನಾವೇ ತೆಗೆದುಕೊಳ್ಳುತ್ತಿಲ್ಲ. 450 ಕೋಟಿ ರೂಪಾಯಿಗಳನ್ನು ಸಾರ್ವಜನಿಕರಿಂದ ಎತ್ತಿರುವ ಹಣಕ್ಕೆ ಬಡ್ಡಿ ನೀಡಲು ನಾವು ವ್ಯಯ ಮಾಡುತ್ತಿದ್ದೇವೆ. ನಮ್ಮ ರಾಜ್ಯದ ಪುಣ್ಯಕ್ಕೆ ಬ್ಯಾಂಕುಗಳು ಹಣವನ್ನು ಕೊಡಲಿ ಮುಂದೆ ಬರುತ್ತಿದ್ದಾರೆ. ಆದ್ದರಿಂದ ಹಣದ ಕೊರತೆ ಇಲ್ಲ. ತಾಂತ್ರಿಕ ಸಮಿತಿಯನ್ನು 20ನೇ ತಾರಿಖಿನಲ್ಲಿ ಮಾಡುತ್ತೇವೆ, ಉಳಿದಿರುವ ಕೆಲಸವನ್ನು ಮಾರ್ಚ್ ನಲ್ಲಿ ಪ್ರಾರಂಭ ಮಾಡಿ ಮೇಜರ್ ಕೆಲಸವನ್ನು ಮುಗಿಸಿಕೊಡುತ್ತೇವೆ.

ಶ್ರೀ ಯುಬಿ. ಬಣಕಾರ್ :— 45 ಕೋಟಿ ರೂಪಾಯಿಗಳನ್ನು ಎಷ್ಟು ದಿನಗಳಲ್ಲಿ ಬಿಡುಗಡೆ ಮಾಡುತ್ತೀರಿ?

ಶ್ರೀ ಕೆ.ಎನ್. ನಾಗೇಗೌಡ :— ಇದು ಬಜೆಟ್ ಕೆಲಸವಲ್ಲ. ಈಗ ನಿಗಮ ಮಾಡಿದ್ದೇವೆಯ ಕಂಪನಿ ಆಕ್ಟ್‌ನ ಪ್ರಕಾರ ಇದು ಬಜೆಟ್ ವರ್ಕ್ ಅಲ್ಲ. ನಮ್ಮ ಹತ್ತಿರ ಹಣವಿದೆ. ಕೃಷ್ಣ ಭಾಗ್ಯ ನಿಗಮದ ಪ್ರಕಾರ ಹಣವನ್ನು ಮಾಡಿಕೊಡುತ್ತೇವೆ.

(8) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

(ಅ) ಆರೋಗ್ಯ ಇಲಾಖೆಯಲ್ಲಿ ಔಷಧಿಗಳ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ.

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) :— ಮಾನ್ಯ ಅಧ್ಯಕ್ಷರೆ, ಮಾತಿಗೆ ಮೊದಲು ನಮ್ಮದು ಸ್ಕಾಂಡಲ್ ಫ್ರೀ ಗೌರ್ನಮೆಂಟ್ ಎಂದು ಅವರು ಹೇಳುತ್ತಾರೆ. ಹಗರಣ ಇಲ್ಲದಿರುವ ಸರ್ಕಾರವೆಂದು ಹೇಳುತ್ತೀರಿ. ನಿನ್ನೆ ನಾನು 'ಸ್ಕಾಂಡಲ್' ಎಂದರೆ ಏನು ಎಂದು ಪದಕೋಶವನ್ನು ತೆಗೆದು ನೋಡಿದೆ. ಅದರಲ್ಲಿ ಅಪನಿಂದೆ, ಕಳಂಕ, ಲೋಕೋಪವಾದ, ಹಗರಣ ಎಂದು ಕನ್ನಡದಲ್ಲಿ ಇತ್ತು. ಇಂಗ್ಲಿಷ್‌ನಲ್ಲಿ -Thing that occasion general feeling of outrage of indignation especially as expressed in common talk approbrium. ಎಂದು ಇದೆ. ಈ ಸರ್ಕಾರದಿಂದ ಆಗಿರುವ ಒಂದು ತಾಜಾ ಹಗರಣವನ್ನು ಸಭೆಯ ಮುಂದೆ ಇಡುತ್ತಿದ್ದೇನೆ. ರಾಜ್ಯ